ಇ) ಸರ್ಕಾರದ ಆದೇಶದಂತೆ ಮುಂದುವರೆಸಲಾಗಿತ್ತು. ಇದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿರುವುದಿಲ್ಲ.

ಈ) ಈಗ ಪ್ರವೇಶ ಶುಲ್ಕ ವಸೂಲಾತಿಯ ಹಕ್ಕನ್ನು ರೂ.3.20 ಕೋಟಿಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಸರ್ಕಾರಿ ಆದೇಶ ದಿನಾಂಕ: 22-02-02 ರಲ್ಲಿ ವಹಿಸಲಾಗಿದೆ. ಕಳೆದ ಬಾರಿಗಿಂತ ಈ ಬಾರಿ ಉಂಟಾಗಿರುವ ಹೆಚ್ಚಳ ರೂ. 1.65 ಕೋಟಿಗಳಾಗಿರುತ್ತದೆ.

ಚಾಮರಾಜನಗರ ತಾಲ್ಲೂಕಿನ ಚಿಕ್ಕಹೊಳೆ ಮತ್ತು ಸುವರ್ಣಾವತಿ ಡ್ಯಾಂಗಳ ಹೂಳೆತ್ತುವುದು

1404 (1936) - ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಚಿಕ್ಕಹೊಳೆ; ಮತ್ತು ಸುವರ್ಣಾವತಿ ಡ್ಯಾಂಗಳು ನಿರ್ಮಾಣಗೊಂಡಿದ್ದು ಯಾವಾಗ; ಇದುವರೆಗೂ ಎಷ್ಟು ಭಾರಿ ಹೂಳು ತೆಗೆಯಲಾಗಿದೆ;

ಆ) ಈ ಎರಡು ಡ್ಯಾಂಗಳಲ್ಲಿ ಸಾಕಷ್ಟು ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೂಳು ತೆಗೆಯುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಚಿಕ್ಕಹೊಳೆ ಮತ್ತು ಸುವರ್ಣಾವತಿ ಡ್ಯಾಂಗಳು 1983-84ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ. ಇದುವರೆವಿಗೂ ಸದರಿ ಜಲಾಶಯದಲ್ಲಿ ಹೂಳನ್ನು ತೆಗೆದಿರುವುದಿಲ್ಲ.

ಆ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಗಣನೀಯ ಪ್ರಮಾಣದಲ್ಲಿ ಹೂಳು ಶೇಖರಣೆಯಾಗಿರುವುದಿಲ್ಲ. ಜಲಾಶಯದ ನೀರಿನ ಶೇಖರಣೆಯಲ್ಲಿ ಯಾವುದೇ ಕಡಿತವಾಗಿರುವುದಿಲ್ಲ. ಅದಾಗ್ಯೂ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಅಂಗನವಾಡಿ ಕಟ್ಟಡಗಳ ಕುರಿತು ನಿರ್ಮಾಣ

1405 (1937) - ಶ್ರೀ ಗುರುಸ್ವಾಮಿ (ಚಾಮರಾಜನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಈ ವರ್ಷ (2001-2002) ಎಷ್ಟು ಹೊಸ ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಯೋಜಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

2. ಈ ವರ್ಷದಲ್ಲಿ ಸಂಪೂರ್ಣಗೊಂಡಿರುವ ಕಾಮಗಾರಿಗಳು ಹಾಗೂ ಕಟ್ಟಡ ಕಾಮಗಾರಿಗಳು ನಡೆಯುತ್ತಿರುವ ಕಾಮಗಾರಿಗಳು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

1. ರಾಜ್ಯದಲ್ಲಿ ಈ ವರ್ಷ 617 ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಯೋಜಿಸಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ-I ರಲ್ಲಿ ಲಗತ್ತಿಸಿದೆ.

2. ಈ ವರ್ಷದಲ್ಲಿ ಸಂಪೂರ್ಣಗೊಂಡಿರುವ ಕಾಮಗಾರಿಗಳು ಹಾಗೂ ಕಟ್ಟಡ ಕಾಮಗಾರಿಗಳು ನಡೆಯುತ್ತಿರುವ ಕಾಮಗಾರಿಗಳ ಜಿಲ್ಲಾವಾರು ವಿವರವನ್ನು ಅನುಬಂಧ-II ರಲ್ಲಿ ಲಗತ್ತಿಸಿದೆ.

ಅನುಬಂಧ - 1

2001-02ನೇ ಸಾಲಿಗೆ ಯೋಜಿಸಿರುವ ಹೊಸ ಅಂಗನವಾಡಿ ಕಟ್ಟಡಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಭೌತಿಕ ಗುರಿ
1	2	3
1	ಬಾಗಲಕೋಟೆ	30
2	ಬೆಂಗಳೂರು (ಗ್ರಾಮಾಂತರ)	20
3	ಬೆಂಗಳೂರು (ನಗರ)	60
4	ಬೆಳಗಾಂ	40
5	ಬಳ್ಳಾರಿ	10
6	ಬೀದರ್	80
7	ಬಿಜಾಪುರ	10
8	ಚಾಮರಾಜನಗರ	13
9	ಚಿಕ್ಕಮಂಗಳೂರು	10
10	ಚಿತ್ರದುರ್ಗ	14
11	ದಕ್ಷಿಣಕನ್ನಡ	20
12	ದಾವಣಗೆರೆ	10
13	ಧಾರವಾಡ	60
14	ಗದಗ	30
15	ಗುಲ್ಬರ್ಗ	0
16	ಹಾಸನ	11
17	ಹಾವೇರಿ	11
18	ಕೊಡಗು	10

1	2	3
19	ಕೋಲಾರ	20
20	ಕೊಪ್ಪಳ	10
21	ಮಂಡ್ಯ	50
22	ಮೈಸೂರು	30
23	ರಾಯಚೂರು	14
24	ಶಿವಮೊಗ್ಗ	10
25	ತುಮಕೂರು	10
26	ಉಡುಪಿ	20
27	ಉತ್ತರ ಕನ್ನಡ	14
	ಒಟ್ಟು	617

ಅನುಬಂಧ - 2

2001-02ನೇ ಸಾಲಿಗೆ ಸಂಪೂರ್ಣ ಗೊಂಡಿರುವ, ಕಾಮಗಾರಿ ನಡೆಯುತ್ತಿರುವ-ಇನ್ನು ಪ್ರಾರಂಭಿಸದೆ ಇರುವ ಅಂಗನವಾಡಿ ಕಟ್ಟಡಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಭೌತಿಕ ಗುರಿ	ಪೂರ್ಣಗೊಂಡಿರುವ ಅಂಗನವಾಡಿ ಕಟ್ಟಡಗಳ ಸಂಖ್ಯೆ	ಕಾಮಗಾರಿ ನಡೆಯುತ್ತಿರುವ ಅಂಗನವಾಡಿ ಕಟ್ಟಡಗಳ ಸಂಖ್ಯೆ	ಇನ್ನೂ ಕೆಲಸ ಪ್ರಾರಂಭಿಸದೆ ಇರುವ ಅಂಗನವಾಡಿ ಸಂಖ್ಯೆ
1	2	3	4	5	6
1	ಬಾಗಲಕೋಟೆ	30	0	24	6
2	ಬೆಂಗಳೂರು (ಗ್ರಾಮಾಂತರ)	20	4	9	7
3	ಬೆಂಗಳೂರು (ನಗರ)	60	1	8	51
4	ಬೆಳಗಾಂ	40	0	0	40
5	ಬಳ್ಳಾರಿ	10	5	0	5
6	ಬೀದರ್	80	0	80	0

1	2	3	4	5	6
7	ಬಿಜಾಪುರ	10	0	8	2
8	ಚಾಮರಾಜನಗರ	13	0	0	13
9	ಚಿಕ್ಕಮಗಳೂರು	10	2	4	4
10	ಚಿತ್ರದುರ್ಗ	14	0	0	14
11	ದಕ್ಷಿಣ ಕನ್ನಡ	20	10	10	0
12	ದಾವಣಗೆರೆ	10	0	10	0
13	ಧಾರವಾಡ	60	24	20	16
14	ಗದಗ	30	3	0	27
15	ಗುಲ್ಬರ್ಗ	0	0	0	0
16	ಹಾಸನ	11	0	0	11
17	ಹಾವೇರಿ	11	0	11	0
18	ಕೊಡಗು	10	5	5	0
19	ಕೋಲಾರ	20	0	13	7
20	ಕೊಪ್ಪಳ	10	3	3	4
21	ಮಂಡ್ಯ	50	0	27	23
22	ಮೈಸೂರು	30	4	4	22
23	ರಾಯಚೂರು	14	0	9	5
24	ಶಿವಮೊಗ್ಗ	10	0	5	5
25	ತುಮಕೂರು	10	0	0	10
26	ಉಡುಪಿ	20	8	12	0
27	ಉತ್ತರ ಕನ್ನಡ	14	0	0	14
		617	69	262	286